# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

## ಸಿ.ಸಿ. ನಂ. 1216/20

ಸಿ.ಡಬ್ಲ್ಯು 3
ಪಿ.ಡಬ್ಲ್ಯು 2

| | | |
|---|---|---|
| ಸಾಕ್ಷಿದಾರರ ಹೆಸರು | - | ಚಂದ್ರಶೇಖರ ನಾಯ್ಕ |
| ತಂದೆಯ ಹೆಸರು | - | ಮಧುಕರ ನಾಯ್ಕ |
| ವಯಸ್ಸು | - | 28 ವರ್ಷ |
| ಉದ್ಯೋಗ | - | ಸಪ್ಲೈರ್ |
| ವಾಸ್ತವ್ಯ | - | ಕುಮಟಾ |

(ಇಂದು ದಿನಾಂಕ 05-07-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ –ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾ.ಸಾ.2 ರವರ ಪರಿಚಯ ಇದೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಸಹಿ ಇರುವುದಾಗಿ ಒಪ್ಪಿದ್ದು, ಸದರಿ ದಾಖಲಾತಿ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕಃ 07-06-2020 ರಂದು ನಾನು ಚಾ.ಸಾ.2 ರವರೊಂದಿಗೆ ಹೊಸ ಬಸ್ ನಿಲ್ದಾಣದಲ್ಲಿ ಇದ್ದಾಗ ಪೊಲೀಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ. ನಿ.ಪಿ.1 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.1 ಕ್ಕೆ ಯಾವ ವಿಚಾರವಾಗಿ ಪೊಲೀಸನವರು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರಿಗೆ ಒಂದು ಫೋಟೊವನ್ನು ತೋರಿಸಲಾಗಿ ಅದರಲ್ಲಿ ತಾವು ಕಂಡುಬರುವುದಾಗಿ ಒಪ್ಪಿದ್ದು, ಸದರಿ ಫೋಟೊವನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೊವನ್ನು ಹೊಸ ಬಸ್ ನಿಲ್ದಾಣದಲ್ಲಿ

ತೆಗೆಯಲಾಗಿದ್ದು, ಯಾವ ವಿಚಾರಕ್ಕಾಗಿ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸನವರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು –ಮಾನ್ಯ ಸ.ಸ.ಅ. ರವರಿಂದ**

ಪೊಲೀಸನವರು ಆರೋಪಿಯು ಓಡಿ ಹೋದ ವಿಚಾರದಲ್ಲಿ ನನ್ನ ಮತ್ತು ಚಾ.ಸಾ.2 ರವರ ಸಮಕ್ಷಮ ಓಡಿ ಹೋದಂತಹ ಸ್ಥಳವಾದ ಹೊಸ ಬಸ್ ನಿಲ್ದಾಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ ನಿ.ಪಿ.1 ರ ರೀತ್ಯಾ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಸಲುವಾಗಿ ನಿ.ಪಿ.2 ಪೋಟೊವನ್ನೂ ಸಹ ತೆಗೆಯಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಬರೆದಂತಹ ವಿಚಾರಗಳ ಬಗ್ಗೆ ಮಾಹಿತಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ಪರಿಚಯ ಇರುವುದಿಲ್ಲ. ನನಗೆ ಆರೋಪಿಯ ಪರಿಚಯ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – ಆರೋಪಿ ಪರ ಶ್ರೀ ಪಿ.ಎಸ್.ಎನ್. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾದಂ. ಕುಮಟಾ